International Journal of Kannada Research 2022; 8(1): 141-143




International Journal of Kannada Research
www.kannadajournal.com

**ISSN: 2454–5813**
IJKR 2022; 8(1): 141-143
© 2022 IJKR
www.kannadajournal.com
Received: 01-11-2021
Accepted: 04-12-2021

**ಶೃತಿ ಸುನಿಲ್‌ದತ್ತ**
ಸಂಶೋಧನಾ ವಿದ್ಯಾರ್ಥಿನಿ
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

**Corresponding Author:**
**ಶೃತಿ ಸುನಿಲ್‌ದತ್ತ**
ಸಂಶೋಧನಾ ವಿದ್ಯಾರ್ಥಿನಿ
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

# ಲಮಾಣಿ ಆತ್ಮಕಥನ ಕಾವ್ಯದಲ್ಲಿ 'ಹಸಿವು'

**ಶೃತಿ ಸುನಿಲ್‌ದತ್ತ**

ಕನ್ನಡ ಸಾಹಿತ್ಯದಲ್ಲಿ ಆತ್ಮಕಥೆಗಳಿಗೆ ಬಹುದೊಡ್ಡ ಸಾಮಾಜಿಕ ಸಾಂಸ್ಕೃತಿಕ ಪರಂಪರೆ ಇದೆ. ಆತ್ಮಕಥೆಗಳ ಸ್ವರೂಪ, ಅಭಿವ್ಯಕ್ತಿ, ಕ್ರಮ, ಭಾಷಿಕನೆಲೆ, ಭಿನ್ನಸಮಾಜ, ಸಮುದಾಯಗಳ ಬದುಕು, ನಂಬಿಕೆ, ಅನುಭವಗಳನ್ನು ಕುರಿತು ಚರ್ಚೆಯ ಕಾರಣಕ್ಕಾಗಿಯಾದರೂ ಆತ್ಮಕಥೆಗಳನ್ನು ಕುರಿತು ಅಧ್ಯಯನ ಮಹತ್ವದ್ದಾಗಿದೆ. ಸಾಹಿತ್ಯದ ನಿರ್ದಿಷ್ಟ ಪ್ರಕಾರವಾಗಿ ಕನ್ನಡ ಆತ್ಮಕಥೆ ಹುಟ್ಟಿರುವುದು ಮೂವತ್ತರ ದಶಕಕದ ತರುವಾಯ ಈ ನಿಟ್ಟಿನಲ್ಲಿ ಹರ್ಡೇಕರ್ ಮಂಜಪ್ಪನವರು ೧೯೩೬ ರಲ್ಲಿ ಪ್ರಕಟಿಸಿದ 'ನನ್ನ ಮೂವತ್ತು ವರ್ಷಗಳ ಕಾಣಿಕೆ' ಕನ್ನಡದ ಮೊಟ್ಟಮೊದಲ ಸ್ವತಂತ್ರ ಆತ್ಮಕಥೆಯಾದರೆ ೧೯೯೪ ರಲ್ಲಿ ಪ್ರಕಟಗೊಂಡಿರುವ ಡಾ.ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ' ಕನ್ನಡ ಮೊದಲ ದಲಿತ ಆತ್ಮಕಥೆಯಾಗಿದೆ.

ಕನ್ನಡ ಆತ್ಮಕಥೆಯ ಪರಂಪರೆಯಲ್ಲಿ ವಿಶಿಷ್ಟ ಅಸ್ಮಿತೆಯನ್ನು ನಿರ್ಮಿಸಿರುವ ದಲಿತ ಆತ್ಮಕಥೆಗಳಿಗೆ ಚಾರಿತ್ರಿಕ ಮಹತ್ವ ಇದೆ. ಆತ್ಮಕಥೆಗಳನ್ನು ಕುರಿತು ಗಂಭೀರ ಅಧ್ಯಯನವನ್ನು ಹುಟ್ಟುಹಾಕಿದ್ದು ದಲಿತ ಆತ್ಮಕಥೆಗಳು. ಸಾಹಿತ್ಯದೃಷ್ಟಿಕೋನ, ಚರ್ಚೆ ಹಾಗೂ ವಿಮರ್ಶೆ ಮಾನದಂಡಗಳನ್ನೆ ಬದಲಿಸಿವೆ. ದಲಿತ ಆತ್ಮಕಥೆಗಳು ವ್ಯಕ್ತಿಗತ ಅಭಿವ್ಯಕ್ತಿಗಳಾಗಿದ್ದರೂ ಸಮಷ್ಟಿಯ ನೆಲೆಯಲ್ಲಿ ಸಾಮುದಾಯಕ ಅನುಭವದ ಕಥನಗಳಾಗಿವೆ. ಹಸಿವು, ಬಡತನ, ಅಸ್ಪೃಶ್ಯತೆ, ಜಾತೀಯತೆ ಅಪಮಾನಗಳು ಹಾಗೂ ಶತಮಾನಗಳಿಂದಲೂ ದಲಿತ ಸಮುದಾಯವನ್ನು ಅವರಲ್ಲಿನ ಸೃಜನಶೀಲ ಶಕ್ತಿಗಳನ್ನು ತುಳಿಯುತ್ತಲೇ ಗಹಗಹಿಸುತ್ತಿರುವುದು ಚಾರಿತ್ರಿಕವಾದ ಸುಡುಸತ್ಯ. ಇಂತ ಅನೇಕ ಚಾರಿತ್ರಿಕವಾದಂತಹ ಆತ್ಮಕಥೆಗಳು ಕನ್ನಡದಲ್ಲಿ ಬಂದಿವೆ. ಆದರೆ ವಿಶಿಷ್ಟವಾಗಿ ದಲಿತ ಆತ್ಮಕಥೆಗಳು ಕನ್ನಡ ಸಾಹಿತ್ಯದಲ್ಲಿ ಕೆಲವೇ ಇದ್ದರು ಅವುಗಳ ಸ್ಥಾನ ಹಿರಿಯದ್ದಾಗಿವೆ. ೧೯೯೪ ರಲ್ಲಿ ಪ್ರಕಟಗೊಂಡಿರುವ ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್‌ಬ್ರಾಹ್ಮಣ' ದಲಿತ ಆತ್ಮಕಥೆಯ ತರುವಾಯ ಹುಟ್ಟಿಕೊಂಡ ಅನೇಕ ಆತ್ಮಕಥೆಗಳು ಬಂದವು ಇವುಗಳಿಗೆಲ್ಲ ಮುಖ್ಯ ಪ್ರೇರಣೆಯಂದರೆ ಮರಾಠಿ ಆತ್ಮಕಥೆಗಳೆಂದು ಹೇಳಬಹುದು.

ಕನ್ನಡದಲ್ಲಿ ಬಂದಿರುವ ದಲಿತ ಆತ್ಮಕಥೆಗಳಲ್ಲಿಯೇ ವಿಶಿಷ್ಟವಾಗಿ ಆತ್ಮಕಥಯೊಂದು ಕಾವ್ಯ ರೂಪದಲ್ಲಿ ಬಂದಿರುವುದು ಶಾಂತಾನಾಯ್ಕ ಶಿರಗಾನಹಳ್ಳಿಯವರ 'ಲಮಾಣಿ'. ಲೇಖಕರು ಕಂಡು ಅನುಭವಿಸಿದ ಎಲ್ಲಾ ರೀತಿಯ ಅನುಭವಗಳನ್ನು ಚಾಚು ತಪ್ಪದೆ ಬರೆದಿಟ್ಟಿದ್ದಾರೆ. ಹಸಿವು ಮತ್ತು ಕಿತ್ತು ತಿನ್ನುವ ಬಡತನ ಈ ಆತ್ಮಕಥೆಯ ಮುಖ್ಯ ವಸ್ತುವಾಗಿದೆ. ಶಾಂತನಾಯ್ಕರ ಈ ಆತ್ಮಕಥೆಯಲ್ಲಿ ದಾಖಲಾಗಿರುವಂತಹ 'ಹಸಿವು' ಎಂಬ ಪದದ ಹಿಂದಿರುವ ಬಡಿದಾಟ, ಹೋರಾಟ, ಆಸೆ ಕನಸು, ಈ ಎಲ್ಲಾ ನೆಲೆಗಳಲ್ಲಿ ಹಸಿವು ಹೇಗೆ ವ್ಯಕ್ತವಾಗಿದೆ ಎಂಬುದು ಅರಿಯುದೆ ಈ ಲೇಖನದ ಮುಖ್ಯ ಉದ್ದೇಶ. ದಲಿತ ಆತ್ಮಕಥೆಗಳು ಮುಖ್ಯವಾಗಿ ಪ್ರಾರಂಭವಾಗುವುದು ವಿದ್ಯಾರ್ಥಿ ಜೀವನದಿಂದಲೆ ಅಲ್ಲಿಂದ ಶುರುವಾಗುವ ಅವರ ಬದುಕಿಗೆ ಯಶಸ್ಸಿನ ಚಿತ್ರದಲ್ಲಿ ಹಸಿವು ಒಂದು ಮುಖ್ಯ ಘಟ್ಟವಾಗಿ ನಿಲ್ಲುತ್ತದೆ. ಅಂತಹದೆ ಘಟನೆಗಳು 'ಲಮಾಣಿ' ಎಂಬ ಆತ್ಮಕಥೆಯಲ್ಲಿ ಕಾಣುತ್ತವೆ. ಶಾಂತನಾಯ್ಕರವರು ಶಾಲೆಗೆ ಹೋಗುವಾಗಿನ ಒಂದು ಘಟನೆಯನ್ನು ದಾಖಲಿಸುತ್ತಾರೆ. ಈ ಘಟನೆಯನ್ನು ಸಹೃದಯರಿಗೆ ಸ್ಮೃತಿಪಟಲದಲ್ಲಿ ಶಾಸ್ವತವಾಗಿ ಉಳಿಯುವಂತಹದು. ಹೊಟ್ಟೆ ತುಂಬಾ ಉಣಲು ಸಿಗದಿದ್ದಾಗ ಹಸಿವು ಸಹಿಸಿಕೊಂಡು ಇರುವುದು ಹಸಿದವನಿಗೆ ಮಾತ್ರ ಗೊತ್ತು. ಅವರ ಶಾಲೆಯ ಮೆಷ್ಟ್ರು ಪಾಂಡುರಂಗರು ಶಾಲೆಗೆ ಆರು ಕಂಟೇನರ್‌ನ ತುಂಬಾ ಊಟ ತರುತಿದ್ದರು. ಎಂದು ಹೇಳುವಲ್ಲಿ ಅವರು ಆ ಬಾಲ್ಯದಲ್ಲಿನ ಆಸೆಯ ಭಾವ ಎಂತದು ಎಂಬುದು ಅವರ ಈ ಬರಹದಲ್ಲಿ ಕಾಣಬಹುದು.

"ನಮ್ಮ ಮೇಷ್ಟ್ರು ಉಂಡಾದ ಮೇಲೆ
ತೊಳೆಯಲು ಕೊಡುತ್ತಿದ್ದ ಕ್ಯಾರಿಯರ್
ತಳದೊಳಗೆ ಉಳಿದಿರಬಹುದಾದ
ಅನ್ನದ ಸಾರಿನ ರುಚಿಗೆ
ಊಟ ಮಾಡುವವರ ಬಾಯಿಯನ್ನೆ ನೋಡುತ್ತ
ಬಾಲ ಆಡಿಸುವ ಕುನ್ನಿಯಂತೆ ಕಾದು
ಹಿಡಿಯನ್ನದ ರುಚಿಗೆ ನಾಲಿಗೆ
ನನ್ನ ಮಾತೆ ಕೇಳದಾಗಿತು."೧

ಹಸಿವನ್ನು ತಾಳದ ಆ ಮುಗ್ಧ ಜೀವ ದಿನಾ ತರುವ ಮೇಷ್ಟ್ರು ಕ್ಯಾರಿಯರ್‌ನ ಕಾಯುತ್ತಾ ಊಟದ ನಂತರ ಅದನ್ನು ತೊಳೆಯಲು ಕೊಡುತ್ತಾರೆ. ಆಗ ಅದರ ತಳದಲ್ಲಿರುವ ಅನ್ನ ಸಾಂಬರಿನ ಆಸೆಗೆ ನಾಯಿಯಂತೆ ಬಾಲ ಅಲ್ಲಾಡಿಸುವಂತೆ ಕಾಯುತ್ತಿದ್ದೆ. ನಂತರ ಅದು ತೊಳೆಯುವಾಗ ನಾಲಿಗೆ ನನ್ನ ಮಾತು ಕೇಳದೆ ನೇರವಾಗಿ ಅದರಲ್ಲಿ ಉಳಿದಿರುವಂತಹ ತುತ್ತು ಅನ್ನದ ರುಚಿ ನೋಡಿಯೇ ಬಿಡುತಿತ್ತು. ಎಂದು ಹೇಳುವಲ್ಲಿನ ಅವರ ಈ ಘಟನೆಯನ್ನು ಎಂತವರಿಗೂ ಘಾಸಿಗೊಳಿಸದೆ ಇರದು. ಆ ಎಳೆ ವಯಸ್ಸಿನ ಕಂದನ ಮೇಲೆ ಹಸಿವು ಎಷ್ಟು ಕ್ರೂರತೆ ಮರೆದಿತ್ತು ಎಂಬುದು ಕಂಡು ಬರುತ್ತದೆ.

"ಮೇಷ್ಟ್ರು ನೆಂಚಿಕೊಂಡು
ಬಿಟ್ಟಿದ್ದ ಮಾವಿನ ವಾಟೆಯನ್ನು
ಸಂಜೆಯಾಗುವರೆಗೂ
ಆಗೆಯುತ್ತಾ ಕಾಲ ಕಳೆದುದ್ದು
ಈಗ ನೆನಪು."೨

ಒಂದೊಂದು ಬಾರಿ ಕ್ಯಾರಿಯರ್ ತೊಳೆಯುವಾಗ ಮೇಷ್ಟ್ರು ಊಟದ ಜೊತೆಗೆ ತಂದಿದ್ದಂತಹ ಮಾವಿನಕಾಯಿ ಉಪ್ಪಿನಕಾಯಿಯನ್ನು ಉಂಡು ಉಳಿದ್ದಂತಹ ಆ ಮಾವಿನ ವಾಟೆಯನ್ನು ತೆಗೆದುಕೊಂಡು ಸಂಜೆಯಾಗುವರೆಗೂ ಅದನ್ನು ಅಗೆಯುತ್ತಾ ಕಾಲ ಕಳೆದಂತಹ ದಿನಗಳು ನೆನಪು ಮಾತ್ರ ಅಂತ ಹೇಳುತ್ತಾರೆ. ಆ ನೆನೆಪು ನೆನೆಪಿನಾಳದಲ್ಲಿ ಉಳಿಯಲು ಹಸಿವೆಯಾಗಿದೆ. ಆ ಮಾವಿನ ವಾಟೆಯ ರುಚಿಯನ್ನು ಉಳ್ಳವರಿಗೇನು ಗೊತ್ತು ಅದರ ಸವಿ ಎಂಬಂತೆ ಲೇಖಕರು ಹಸಿದವನಿಗೆ ಮಾತ್ರ ಗೊತ್ತು ಎಂಬುದನ್ನು ತೋರಿಸಿದ್ದಾರೆ.
ಬಯಲು ಸೀಮೆಯಲ್ಲಿ ಕೆಲಸವಿದ್ದರೆ ಮಾತ್ರ ಇಲ್ಲದಿದ್ದರೆ ಉಪವಾಸವೇ ಗತಿ ಅಂತಹ ಪರಿಸ್ಥಿತಿಯನ್ನು ಲೇಖಕರ ಕುಟುಂಬ ಅನುಭವಿಸುತ್ತಿತ್ತು. ಅದೆಷ್ಟೋ ಸಾರಿ ಹಸಿದ ಹೊಟ್ಟೆಗೆ ನೀರೆ ಗತಿ ಎಂದು ಮಲಗುವ ಪರಿಸ್ಥಿಯನ್ನು ಅವರು ಅನುಭವಿಸಿದ್ದಾರೆ. ಮೂರು ಮೂರು ದಿನಗಳಾದರೂ ಒಲೆ ಹೊತ್ತಿಸಿದ್ದಿದ್ದಾಗ ಹಸಿದ ಆ ಮಗು ಸಾಬರ ಹೋಟಲನಲ್ಲಿ ಕೆಲಸ ಮಾಡುವ ತನ್ನ ಸೋದರ ಮಾವನನ್ನು ಅರಸಿ ಹೋದಾಗ ತನ್ನ ಮಾವ ಲೇಖಕರು ಬಂದಿರುವುದು ಗಮನಿಸಿ ಊಟ ಹಾಕುವಂತ ಸಂದರ್ಭವನ್ನು ತುಂಬಾ ಅರ್ಥಪೂರ್ಣವಾದ ಸಾಲುಗಳಲ್ಲಿ ಹಿಡಿದಿಟ್ಟಿರುವುದು ಇಲ್ಲಿ ನೋಡಬಹುದು.

"ಸಾಹೇಬರ ಹೋಟೆಲ್‌ನಲ್ಲಿ ಚಪಾತಿ ತಟ್ಟುತ್ತಿದ್ದ
ಒಕಣ್ಣಿನ ಸೋದರ ಮಾವನಿಗೆ ಹೊರೆ
ಒಂದೇ ಕಣ್ಣಿಂದ ನನ್ನ ನೋಡಿ ಬೀಡಿ ಕಚ್ಚಿದ
ಹಲ್ಲಿನ ಸಂದಿನಿಂದಲೇ
ಯಾಕ್ಲ ಬಂದೆ?
ನನ್ನ ಮೌನದಿಂದಲೆ ಅರಿತು
ಉಳಿದ ರಾತ್ರಿಯ ಸೇರ್ವಾ ಪರೋಟ ಕೊಟ್ಟು
ಮೂಲೆ ತೋರಿಸುತಿದ್ದ."೩

ಮೊದಲ ತನೆಮಾರಿನ ದಲಿತರ ವಿದ್ಯಾರ್ಥಿ ಜೀವನ ವಸತಿನಿಲಯವೇ ಆಗಿತ್ತು. ಬದುಕಿ ಮೆಟ್ಟಿಲಾದಂತ ವಸತಿನಿಲಯದ ಘಟನೆಗಳು ದಲಿತ ಆತ್ಮಕಥೆಯಲ್ಲಿ ಕಾಣುತ್ತೆವೆ. ಇತರರಂತೆ ಶಾಂತನಾಯ್ಕರು ತಮ್ಮ ವೈಯಕ್ತಿಕ ಜೀವನವನ್ನು ವಸತಿ ನಿಲಯದಲ್ಲಿ ಕಳೆದಿರುವುದು ನಾವು ನೋಡುತ್ತೇವೆ. ಶಾಂತನಾಯ್ಕರ ತಾವು ಅನುಭವಿಸಿದ ವಸತಿಜೀವನದಲ್ಲಿನ ಹಸಿವು ಪೂರೈಸಿಕೊಂಡು ಬದುಕಿದ್ದು, ಆ ಆಹಾರ ತಿಂದು ಅನುಭವಿಸಿದ ನೋವು, ಪಟ್ಟಿರುವ ಕಷ್ಟ ಹೇಳ ತೀರದು. ವಸತಿ ನಿಲಯದಲ್ಲಿ ನೀಡುವ ಆಹಾರದ ಬಗ್ಗೆ ಹೀಗೆ ಹೇಳುತ್ತಾರೆ.

"ನುಸಿ ಮುಟ್ಟಿದ ಜೋಳದ ಮುದ್ದೆ
ಮಾರುದ್ದ ಮೊಳಕೆ ಹೊಡೆದ ಹುರುಳಿ ಸಾರಿನಲ್ಲಿ
ಕೊಳೆತ ಹುಳುಗಳ ಸಮೇತ ಬೇಯಿಸಿದ ಬದನೆಕಾಯಿ ಸಾರು
ಮುದ್ದೆ ತಣ್ಣಗಾಗಿ ಕೋಟಿನ ಮೇಲೆ ಕೋಟು ಕಟ್ಟಿ
ಬಿರ್ಕಲ ಬಿರುಪ್ಪನಂತಾದಾಗ
ನಾಲಿಗೆ ರುಚಿ ಕಳ್ಕೊಂಡು
ವಿಲಿ ವಿಲಿ ಒದ್ದಾಡುತ್ತಿತ್ತು."೪

ದಲಿರತ ಬದುಕುನ ಎಂತಹ ಘೋರವಾಗಿತ್ತು ಪ್ರಾಣಿ ಪಕ್ಷಿಗಳಿಗಿಂಗ ಕಡೆಯಾಗಿತ್ತು ಎಂಬ ಚಿತ್ರಣವನ್ನು ಇಲ್ಲಿ ಎದುರಾಗಿ ನಿಲ್ಲುತ್ತದೆ. ದಲಿತರು ಹಸಿವಿನೊಂದಿಗಿನ ಹೋರಾಟದಲ್ಲಿ ಎಂದಿಗೂ ಸೋತವರಲ್ಲ ಎಂಬದು ಐತಿಹಾಸಿಕವಾದ ಸತ್ಯ.
ಕಿತ್ತು ತಿನ್ನುವ ಬಡತನದಲ್ಲಿ ಹೊಟ್ಟೆ ತುಂಬಿಕೊಳ್ಳುವುದು ಒಂದು ದೊಡ್ಡ ಸವಾಲೆ ಸರಿ. ಹಿಗಿರುವಾಗ ಹಬ್ಬಹರಿದಿನಗಳ್ಳು ಬಂದರೆ ಮುಗಿತು. ಆದರೂ ದುಡಿಯುವವನಿಗೆ ದುಡ್ಡಾದರು ಸರಿ ಎನ್ನವಂತೆ ಬದುಕಿದ್ದಾರೆ. ಇಂತಹ ಸಂದರ್ಭಗಳು ಎದುರಾಗಿನಿಂತಾಗ ಮನೆಯಲ್ಲಿ ಕಾಳುಕಡಿಯ ಚಿಂತೆ ಮಾಡುತ್ತಾ ಲೇಖಕರ ತಂದೆ ಭಟ್ಟರ ಹೊಲದಲ್ಲೋ, ಸಾಬರ ಹೊಲದ ಅಕ್ಕ ಪಕ್ಕದಲ್ಲಿ ಬೆಳೆದಿರುವಂತ ಅಣಬೆಯನ್ನು ಆಯ್ದುಕೊಂಡು ನಗರದಲ್ಲಿ ಮಾರಿ ಕಾಳು ಖರಿದಿಯ ಕನಸು ಕಾಣುವರು. ಲೇಖಕರು ಜೊತೆಗಿದ್ದರೆ ತಂದೆ ಮಗನಿಗೆ ತೋರುವ ಕಾಳಜಿಯಲ್ಲಿ ಹಸಿವು ವ್ಯಕ್ತಗೊಂಡಿರುವುದು ಕಾಣಬಹುದು.

"ತರಕಾರಿ ಮಾರ್ಕೆಟಿನ ಎದುರಿನ ಚಹದಂಗಡಿಯಲ್ಲಿ
ಕರೆದೊಯ್ದು, ನನಗೊಂದು ಮಂಡಕ್ಕಿ ಮಣಸಿನಕಾಯಿ
ಕೊಡಸಿ ತಾನು ಮಾತ್ರ ಖಾಲಿ ಚಹ ಕುಡಿದು
ತೃಪ್ತಿಯಿಂದ ನನ್ನತ್ತ ನೋಡುತ್ತಿದ್ದ"೫
ತಂದೆಗೆ ಮಗನ ಹಸಿವು ಅರ್ಥವಾದರೆ ಮಗನಿಗೆ ತನ್ನಪ್ಪ ತೋರಿದ ಪ್ರೀತಿಯಲ್ಲಿ ತನ್ನ ಹಸಿವು ಅಡಗಿಸಿಕೊಂಡಿದು ಮನಕಲಕುವಂತದ್ದಾಗಿದೆ.

ಒಂದೊಂದು ಬಾರಿ ಹೊಲದಲ್ಲಿ ಕೆಲಸಕ್ಕೆಂದು ಅಣ್ಣನ ಜೊತೆಗೆ ಹೋದಾಗ ಹಸಿವು ತಡಿಯದೆ ಹೊಲದಲ್ಲಿರುವ ನೇರಳೆ ಹಣ್ಣನ್ನು ತಿಂದು ಆ ಕ್ಷಣದ ಹಸಿವು ಪೂರೈಸಿಕೊಂಡಿರುವುದು ಕಂಡರೆ ಹಸಿವಿನ ಕರಾಳ ಮುಖ ಎದುರಾಗಿ ನಿಲ್ಲತ್ತೆ. ಈ ನೇರಳೆ ಹಣ್ಣನ್ನು ಆಹಾರವಾಗಿ ಸೇವಿಸಿದ ಆ ಮರೆಯದ ಕ್ಷಣವನ್ನು ತಮ್ಮ ಕಾವ್ಯರೂಪದಲ್ಲಿ ಈ ಕಳಗಿನಂತೆ ತೆರೆದಿಟ್ಟಿದ್ದಾರೆ.

"ಮರ ಹತ್ತಿದ ಅಣ್ಣನಿಗೆ ಪೂಸಿ
ಅಪ್ಪ ನೋಡಿದರೆ ಮೈ ಚರ್ಮ ಸುಲಿವನೆಂಬ ಭಯದ
ನಡುವೆ ಹಸಿವು ಕಾಡಿತು
ಹೇಗೋ ಮರಹತ್ತಿ ಕರಿ, ಕೆಂಪು ದ್ವಾರಗಾಯಿ
ರಾಶಿ ರಾಶಿ ಉದುರಿಸಿದ
ಜೇಬ ತುಂಬಾ ನೇರಳೆ
ಆ ಕ್ಷಣದ ಹಸಿವಿಗೆ ಆಹಾರ"[೬]

ಕಾವ್ಯಧಾರೆಯಲ್ಲಿ ಹರಿದು ಬಂದ ಶಾಂತನಾಯ್ಕರವರ ಬದುಕಿನಲ್ಲಿನ ಹಸಿವಿನ ಬಗೆ ಯಾವತರನಾಗಿತ್ತು ಅದನ್ನು ಹೇಗೆ ಮೆಟ್ಟಿನಿಂತು ಬದುಕಿದರು. ಹಸಿವನ್ನು ಗೆದ್ದರೆ ಜಗವೇ ಗೆಲ್ಲಬಹುವುದು ಎಂಬುದಕ್ಕೆ ಅವರ ಆತ್ಮಕಥೆ ಸಾಕ್ಷಿಯಾಗಿ ನಿಲ್ಲುತ್ತದೆ. ಇಡಿ ಆತ್ಮಕಥೆಯನ್ನು ಆಧರಿಸಿ ಹೇಳುವುದಾದರೆ, ಹಸಿವು ಜಗತ್ತಿನಲ್ಲೇನಾದರೂ ಮಾಡಿಸುತ್ತದೆ ಎಂಬ ಸ್ಪಷ್ಟ ಚಿತ್ರಣವನ್ನು ಪ್ರತಿಯೊಬ್ಬ ಓದುಗನಿಗೂ ತಿಳಿಸುತ್ತದೆ. ಹಸಿವನ್ನು ಮೆಟ್ಟಿನಿಂತು ಅಕ್ಷರವನ್ನು ಕಲಿತರೆ ತಲತಲಾಂತರದಿಂದ ತುಳಿತಕ್ಕೊಳಗಾಗಿದ್ದವರು ಮೇಲೆ ಬರಲು ಶಿಕ್ಷಣವೆಂಬ ಮೂಲ ಸಾಧನದಿಂದ ಸಾಧ್ಯವಾಗುತ್ತದೆ. ಬಡತನಕ್ಕೆ ಕತ್ತಲೆಗೆ ಅಕ್ಷರವೇ ಬೆಳಕ್ಕಾಗಿ ನಿಲ್ಲುತ್ತೆ ಎನ್ನುವಲ್ಲಿ ಈ 'ಲಮಾಣಿ' ಆತ್ಮಕಥನ ಕಾವ್ಯ. ಸಾಕ್ಷಿಯಾಗುತ್ತೆ.

**ಟಿಪ್ಪಣಿಗಳು**

೧) ಲಮಾಣಿ ಆತ್ಮಕಥನ ಕಾವ್ಯ- ಶಾಂತನಾಯ್ಕ ಶಿರಗಾನಹಳ್ಳಿ ಪುಟ ಸಂಖ್ಯೆ -೦೬
೨) ಅದೇ ಪುಟ ಸಂಖ್ಯೆ -೦೬
೩) ಅದೇ ಪುಟ ಸಂಖ್ಯೆ-೦೮
೪) ಅದೇ ಪುಟ ಸಂಖ್ಯೆ-೧೦
೫) ಅದೇ ಪುಟ ಸಂಖ್ಯೆ-೨೨
೬) ಅದೇ ಪುಟ ಸಂಖ್ಯೆ-೩೦
೭) ಕನ್ನಡ ದಲಿತ ಸಾಹಿತ್ಯ - ಸಂ ಪ್ರೊ. ಎಚ್. ಟಿ ಪೋತೆ
೮) ಕರ್ನಾಟಕ ಸಮಗ್ರ ದಲಿತ ಸಾಹಿತ್ಯ ಚರಿತ್ರೆ – ಡಾ. ಚಿನ್ನಸ್ವಾಮಿ ಸೋಸಲೆ
೯) ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ೫ – ಪ್ರ.ಸಂ. ಡಾ.ಅರವಿಂದ ಮಾಲಗತ್ತಿ.